ಸಿ.ಸಿ ನಂಬ್ರ: 658/2024
ಪಿ .ಡಬ್ಲ್ಯೂ ಃ 1

ದಿನಾಂಕಃ 07-05-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಮುಂದುವರೆದ ಪಾಟೀ ಸವಾಲು ಃ ಆರೋಪಿ ಪರ ಶ್ರೀ ಆರ್ ಕೆ ಎಮ್ ವಕೀಲರಿಂದ

15.ನಾನು ಹಿಂದಿನ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರು ಪಡಿಸಿದ ಆದಾಯ ತೆರಿಗೆ ಪಾವತಿ ದಾಖಲೆಗಳು ಸರಿಯಾಗಿರುತ್ತವೆ. ಅವುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ವಾರ್ಷಿಕವಾಗಿ ನನ್ನ ಲೆಕ್ಕ ಪರಿಶೋಧಕರ ಮೂಲಕ ಐಟಿ ಕಚೇರಿಗೆ ಸಲ್ಲಿಸಿರುತ್ತೆನೆನೆಂದರೆ ಸರಿ. ಸಾಕ್ಷಿಗೆ ಈಗ ತಾನು ಹಾಜರುಪಡಿಸಿದಂತಹ 10 ವರ್ಷಗಳ ಐಟಿ ಪಾವತಿಗಳನ್ನು ತೋರಿಸಿದ್ದು, ಸಾಕ್ಷಿ ಅವುಗಳನ್ನು ತಾನೇ ಆಧಾಯ ತೇರಿಗೆ ಕಚೇರಿಗೆ ಸಲ್ಲಿಸಿರುವುದಾಗಿ ತಿಳಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಡಿ 1 ರಿಂದ 12 ಅಂತಾ ಗುರುತಿಸಲಾಯಿತು.

16.ಆಯಾಯ ವರ್ಷದಲ್ಲಿ ಆದಂತಹ ವ್ಯವಹಾರವನ್ನು ಆಯಾಯ ವರ್ಷದಲ್ಲಿ ಆದಾಯ ತೆರಿಗೆಯಲ್ಲಿ ತೋರಿಸಬೇಕಾಗುತದೆ ಎಂದರೆ ಸರಿ. ನಾನು ಮಾರಾಟ ಮಾಡಿದ್ದು 6 ಕೊಟಿ 75 ಲಕ್ಷಕ್ಕೆ ಸದರಿ ಮೊಬಲಗು ಆದಾಯ ತೇರಿಗೆಯಲ್ಲಿ ಕಂಡು ಬರಲೆಬೆಕು ಎಂದು ನುಡಿಯುುತ್ತಾರೆ. 6 ಕೊಟಿ 75 ಲಕ್ಕೆ ವ್ಯವಹಾರಕ್ಕೆ ಸಂಬದಪಟ್ಟ ಮಾಹಿತಿಯನ್ನು ನಮ್ಮ ಲೇಕ್ಕ ಪರಿಶೋಧಕರಿಗೆ ಕೊಟ್ಟಿರುತ್ತೇನೆ. 2022 ರ ಆದಾಯ ತೆರಿಗೆ ಯಲ್ಲಿ ಸದರಿ ಮೊತ್ತ ನಮೂದು ಇರುವುದು ಕಂಡು ಬರುತ್ತದೆ ಎಂದು ನುಡಿಯುತ್ತಾರೆ. ಮುಂದುವರಿದ ವರ್ಷಗಳಲ್ಲಿ ಅದು ಕಂಡು ಬಂದಿರುವುದಿಲ್ಲ. ಸಾಕ್ಷಿಗೆ ನಿಡಿ -1 ರಿಂದ 12 ರ ದಾಖಲೆಗಳನ್ನು ಕೊಟ್ಟು ಯಾವ ದಾಖಲೆಗಳಲ್ಲಿ ಕಂಡು ಬರುತ್ತದೆ ಎಂದರೆ ಸಾಕ್ಷಿ ನನಗೆ ಈಗ ತೊರಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

17. 4 ಕೊಟಿ 40 ಲಕ್ಷ ರೊಪಾಯಿಯ ವ್ಯವಹಾರವನ್ನು 2022 ರ ಆದಾಯ ತೆರಿಗೆಯ ಪಾವತಿಯಲ್ಲಿ ತೋರಿಸಲಾಗಿರುತ್ತದೆ. ತಮಗೆ ದಾಖಲಾತಿಗಳನ್ನು ತೊರಿಸಿದರೆ ಸದರಿ ಎಂಟ್ರಿಯನ್ನು ತೊರಿಸುತ್ತಿರಾ ಎಂಬ ಪ್ರಶ್ನೆಗೆ, ಸಾಕ್ಷಿ ಈಗ ದಾಖಲೆಗಳನ್ನು ನೋಡಿ ನಮ್ಮ ಲೆಕ್ಕಪರಿಶೊಧಕರು ಎನು ಕೊಟ್ಟಿರುತ್ತಾರೆ ಅದನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ -1 ರಿಂದ 12 ದಾಖಲೆಯಲ್ಲಿ 4 ಕೊಟ್ಟಿ 40 ಲಕ್ಷ ನಮೂದು ಇರುವ

ಬಗ್ಗೆ ತೋರಿಸಲು ಆಗುತ್ತದಾ ಎಂದರೆ  ಸಾಕ್ಷಿ ನಾನು ಈಗ ಹಾಜರು ಪಡಿಸಿದ ದಾಖಲೆಯಲ್ಲಿ ನಮೂದು ಇರುವುದಿಲ್ಲ ನನ್ನ ಲೆಕ್ಕ ಸಲಹೆಗಾರರನ್ನು ವಿಚಾರಿಸಿ ಹೆಳುತ್ತೇನೆ ಎಂದು ನುಡಿಯುತ್ತಾರೆ.

18.ನಾನು ಸುಳ್ಳು ಮಾಹಿತಿ ಕೊಟ್ಟಿರುವುದರಿಂದ ಸದರಿ ವಿಚಾರಗಳನ್ನು ನನ್ನ ಆದಾಯ ತೆರಿಗೆ ಪಾವತಿಯಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಆದಾಯ ತೆರಿಗೆ ಪಾವತಿಯಲ್ಲಿ ನನ್ನ ಹಾಗೂ ಆರೋಪಿತಳ ವ್ಯವಹಾರಕ್ಕೆ ಸಂಬಂದಪಟ್ಟಂತೆ 50 ಲಕ್ಷ , 46 ಲಕ್ಷಗಳ ಎರಡೂ ನಮೂದುಗಳು ಇರುತ್ತವೆ. ನಾನು ಹಾಜರುಪಡಿಸಿದಂತಹ ಮಾಹಿತಿಗಳು ಸತ್ಯ ವಾಗಿರುತ್ತವೆ. ಆರೊಪಿತಳಿಂದ  ನನಗೆ 3 ಕೊಟಿ 50 ಲಕ್ಷ ಬರುವುದು ಬಾಕಿ ಇರುತ್ತದೆ. ಸದರಿ  3 ಕೊಟಿ 50 ಲಕ್ಷ ಬಾಕಿ ಬರುವುದು ಆದಾಯ ತೆರಿಗೆ ಪಾವತಿಯಲ್ಲಿ ನಮೂದಿಸಿರುವುದಿಲ್ಲ. ನಾನು ಈ ಬಗ್ಗೆ ಲೆಕ್ಕ ಸಲಹೆಗಾರರಿಗೆ ಹೆಳಿರುತ್ತೇನೆ. ನನಗೆ ನನ್ನ ಆದಾಯ ತೆರಿಗೆ ಸಲಹೆಗಾರರು 3 ಕೊಟಿ 50 ಲಕ್ಷ ಬರಬೇಕಾದ ವಿಚಾರವನ್ನು ಆದಾಯ ತೆರಿಗೆ ಕಚೇರಿಗೆ ತಿಳಿಸುವ ವಿಚಾರ ನನಗೆ ತಿಳಿಸಿರುತ್ತಾರೆ ಹಾಗು ಹಣ ಬಂದ ಕೂಡಲೆ ತೆರಿಗೆ ಕಟ್ಟುವ ವಿಚಾರವವ್ನು ಸಹ ನನಗೆ ತಿಳಿಸಿರುತ್ತಾರೆ.

19.ನಾನು ವ್ಯವಹಾರಸ್ತಾನಗಿರುವುದರಿಂದ ಆದಾಯ ತೆರಿಗೆ ಇಲಾಖೆಗೆ ಕೂಡುವ ಮಾಹಿತಿಗಳು ಪಾರದರ್ಶಕವಾಗಿರಬೇಕು ಎಂದರೆ ಸರಿ.  4 ಕೊಟಿ 40 ಲಕ್ಷಕ್ಕೆ ಸಬಂದಪಟ್ಟಂತೆ ತೇರಿಗೆ ಪಾವತಿಸಿರುತ್ತೇನೆ. ಎಷ್ಟು ಪಾವತಿ ಮಾಡಿರುತ್ತೇನೆ ಅಂತಾ ನನಗೆ ನೆನಪಿರುವುದಿಲ್ಲ, ಆರೋಪಿತಳು  3 ಕೊಟಿ 50 ಲಕ್ಷ ಕೊಡುವುದು ಬಾಕಿ ಇರುವುದಿಲ್ಲ, ನಾನು ಆರೋಪಿತಳ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿತಳು ಚೆಕ್ ಅಮಾನ್ಯಕರಣ ಅಪರಾದವನ್ನು ಮಾಡಿರುವುದಿಲ್ಲ, ನಾನು ಆರೋಪಿತಳ ಚೆಕ್ ನ್ನು ದೂರುಪಯೋಗ ಮಾಡಿಕೊಂಡಿದ್ದೇನ ಅಂದೆರ ಸರಿಯಲ್ಲ.

20.ಆರೊಪಿತಳ ವಿದ್ಯಾಬ್ಯಾಸ ಗೊತ್ತಿರುವುದಿಲ್ಲ. ಆರೊಪಿತಳಿಗೆ  ಇಂಗ್ಲಿಷ್ ಬರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆಕೆ ಆಂಗ್ಲ ಬಾಷೆಯಲ್ಲಿ ಸಹಿ ಮಾಡಿ ಕೊಟ್ಟಿರುತ್ತಾರೆ ಎಂದು ನುಡಿಯತ್ತಾರೆ.  ನಿಪಿ - 1 ರಲ್ಲಿ ಕೃಷ್ಣಯ್ಯ ಶೆಟ್ಟಿ 3 ಕೊಟಿ 50 ಲಕ್ಷ ಎಂದೂ ಆಂಗ್ಲ ಬಾಷೆಯಲ್ಲಿ ಬರೆಯಲಾಗಿರುತ್ತದೆ ಎಂದರೆ ಸರಿ. ಆರೋಪಿತಳೆ ಅವರ ವಕೀಲರ ಮೂಖಾಂತರ ನನಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಎದುರಿಗೆ ಚೆಕ್ ಗೆ ಸಹಿ ಮಾಡಿರುತ್ತಾಳೆ. ಚೆಕ್ ನಲ್ಲಿರುವ ಮಾಹಿತಿಯನ್ನು ನಾನೆ ನನಗೆ ಬೆಕಾದವರ ಕಡೆಯಿಂದ ಬರೆಸಿರುತೇನೆ ಅಂದರೆ ಸರಿಯಲ್ಲ . ಅಂಕಿಯಲ್ಲಿರುವ  3 ಕೊಟಿ 50 ಲಕ್ಷ ಎಂಬುದನ್ನು ನಾನೆ ನನ್ನ ಬೇಕಾದವರಿಂದ

ಬರೆಸಿರುತ್ತೇನೆ ಅಂದರೇ ಸರಿಯಲ್ಲ. ಆರೋಪಿತಳಿಗೆ ಆಂಗ್ಲ ಬಾಷೆ ಬರುವ ನನಗೆ ಗೊತ್ತಿರುವುದಿಲ್ಲ. ಆರೂಪಿತಳ ವಕೀಲರಾದ ಸಂತೂಷಕುಮಾರ ಶೆಟ್ಟಿ ರವರು ಚೆಕ್ ಕೊಟ್ಟಿರುತ್ತಾರೆ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ